ಸಂಪುಟ 01 | ಸಂಚಿಕೆ 81 | ಮಂಗಳವಾರ 03 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ, ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707586, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಮಹಿಳಾ ವೈದ್ಯರ ದಿನ.**

ಈ ದಿನಾಂಕವು ಅಮೆರಿಕದ ಮೊದಲ ಮಹಿಳಾ ವೈದ್ಯೆ ಎಲಿಜಬೆತ್ ಬ್ಲ್ಯಾಕ್‌ವೆಲ್ ಅವರ ಜನ್ಮದಿನವನ್ನು ಆಚರಿಸುತ್ತದೆ ಮತ್ತು ಇದು ದೇಶಾದ್ಯಂತ ಮಹಿಳಾ ವೈದ್ಯರನ್ನು ಮತ್ತು ಬ್ಲ್ಯಾಕ್‌ವೆಲ್ ಕಾಲದಿಂದಲೂ ಆಗಿರುವ ಪ್ರಗತಿಯನ್ನು ಗೌರವಿಸುವ ಸಮಯವಾಗಿದೆ.

**2) ರಾಷ್ಟ್ರೀಯ ಗೋಲ್ಡನ್ ರಿಟ್ರೈವರ್ ದಿನ**

ಕೆಲವು ದೇಶಗಳಲ್ಲಿ, ಫೆಬ್ರವರಿ 3 ರಾಷ್ಟ್ರೀಯ ಗೋಲ್ಡನ್ ರಿಟ್ರೈವರ್ ದಿನವಾಗಿದೆ. ಗೋಲ್ಡನ್ ರಿಟ್ರೈವರ್ ಅತ್ಯಂತ ಜನಪ್ರಿಯ ನಾಯಿ ತಳಿಗಳಲ್ಲಿ ಒಂದಾಗಲು ಒಳ್ಳೆಯ ಕಾರಣವಿದೆ. ಅವು ಯಾವುದೇ ನಾಯಿ ಪ್ರಿಯರಿಗೆ ಆದರ್ಶ ಸ್ನೇಹಿತರಾಗಿದ್ದಾರೆ ಮತ್ತು ಅವುಗಳ ಶಾಂತ ಸ್ವಭಾವ, ಬುದ್ಧಿವಂತಿಕೆ ಮತ್ತು ತಮಾಷೆಯಿಂದಾಗಿ ಆಚರಣೆ ಮತ್ತು ಮೆಚ್ಚುಗೆಗೆ ಕಾರಣವಾಗಿವೆ.

## ಸುಭಾಷಿತ

ದೊಡ್ಡ ಯೋಚನೆಗಳೊಡನೆ ಇರುವವರು
ಎಂದೂ ಏಕಾಂಗಿಗಳಲ್ಲ

ಸರ್.ಫಿಲಿಪ್ ಸಿಡ್ನಿ.

# ಕೇಂದ್ರದಿಂದ ಜನವಿರೋಧಿ ಯೋಜನೆ ಜಾರಿ ಸಚಿವ ಚಲುವರಾಯಸ್ವಾಮಿ

**ಬೆಂಗಳೂರು: ನರೇಂದ್ರ ಮೋದಿ ಅವರು ಪ್ರಧಾನಿಯಾದಾಗಿನಿಂದಲೂ, ಒಂದಲ್ಲ ಒಂದು ಜನ ವಿರೋಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಭಾವನಾತಕ ರಾಜಕಾರಣದ ಮೂಲಕ ಜನರ ದಿಕ್ಕು ತಪ್ಪಿಸಲಾಗುತ್ತಿದೆ. ಜನ ಪರವಾದ ಯಾವ ಯೋಜನೆಗಳನ್ನು ರೂಪಿಸಿಲ್ಲ ಎಂದು ಕಷಿ ಸಚಿವ ಚಲುವ ರಾಯಸ್ವಾಮಿ ಆರೋಪಿಸಿದರು.**

ಮನ್ರೇಗಾ ಯೋಜನೆ ರದ್ದುಗೊಳಿಸಿರುವುದನ್ನು ವಿರೋಧಿಸಿ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದ್ದ ರಾಜಭವನ ಚಲೋದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದೇಶದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತ್‌ನಿಂದಲೂ ಒಂದು ಕೋಟಿ ರೂಪಾಯಿಗಳವರೆಗೂ ಖರ್ಚು ಮಾಡಲು ಅವಕಾಶ ಇತ್ತು. ಈಗ ರಾಜ್ಯದ ಪಾಲನ್ನು ಶೇ.40ರಷ್ಟು ವೆಚ್ಚ ಭರಿಸಬೇಕು ಎಂದು ನಿಯಮ ರೂಪಿಸಲಾಗಿದೆ. ಕೇಂದ್ರ ಸರ್ಕಾರ ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಿದೆ ಎಂದು ಕಿಡಿಕಾರಿದರು. ಮೊದಲಿದ್ದ ಮನ್ರೇಗಾ ಯೋಜನೆಯನ್ನು ಮರು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಬಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ಕೇಂದ್ರ ಸರ್ಕಾರ



ಮನ್ರೇಗಾ ಬದಲಾವಣೆ ಮೂಲಕ ಗ್ರಾಮೀಣ ಜನರಿಗೆ ದೊಡ್ಡ ಪ್ರಮಾಣದ ಅನ್ಯಾಯ ಮಾಡಿದೆ. ಸ್ವಾತಂತ್ರ್ಯ ಭಾರತದಲ್ಲಿ ಜನರಿಗೆ ಸಂವಿಧಾನ ಬದ್ಧವಾದ ಉದ್ಯೋಗದ ಹಕ್ಕನ್ನು ನೀಡಲಾಗಿತ್ತು. ಮಹಾತ ಗಾಂಧಿ ಅವರ ಕನಸಿನಂತೆ ಗ್ರಾಮೀಣಾಭಿವೃದ್ಧಿಗೆ ಉದ್ಯೋಗ ಖಾತ್ರಿ ಪೂರಕವಾಗಿತ್ತು. ಸ್ಥಳೀಯವಾಗಿ ಕಾಮಗಾರಿಗಳನ್ನು ನಿರ್ಧರಿಸಲಾಗುತ್ತಿತ್ತು. ಸ್ಥಳೀಯವಾಗಿ ಉದ್ಯೋಗ ದೊರೆಯುವುದನ್ನು ತಪ್ಪಿಸಲು ಪ್ರಯತ್ನಿಸಲಾಗಿದೆ. ವಿಬಿ-ಜಿ ರಾಮ್‌ಜಿ ಯೋಜನೆಯನ್ನು ಹಿಂಪಡೆದು, ಮೊದಲಿನಂತೆ ಮನ್ರೇಗಾ ಯೋಜನೆಯನ್ನು ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದರು. ವಿಬಿ-ಜಿ ರಾಮ್ ಜಿ ಯೋಜನೆಯಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳು ಒಳಪಡುವುದಿಲ್ಲ. ಆಯಾ ಗ್ರಾಮಗಳಿಗೆ ಬೇಕಾದ ಯೋಜನೆ ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ. ಶೇ.40ರಷ್ಟು ರಾಜ್ಯದ ಪಾಲು ನೀಡಿದರೂ ಅದು ಪ್ರಯೋಜನವಾಗುವುದಿಲ್ಲ. ಕನಿಷ್ಠ ಕೂಲಿ ನಿರ್ಧರಿಸುವ ಹಕ್ಕನ್ನು ರಾಜ್ಯ ಸರ್ಕಾರಗಳಿಂದ ಮೊಟಕುಗೊಳಿಸಲಾಗಿದೆ. ಎಂದು ಆರೋಪಿಸಿದರು. ಮಹಾತಗಾಂಧಿಯವರ ವಿಚಾರ ಧಾರೆಗಳಿಗೆ ಬಿಜೆಪಿಯವರು ಕೈ ಹಾಕಿದ್ದಾರೆ. ಕಾಂಗ್ರೆಸ್‌ನವರು ಎಚ್ಚೆತ್ತುಕೊಳ್ಳದ್ದಿರೆ, ಸಂವಿಧಾನವನ್ನು ಬದಲಾವಣೆ ಮಾಡುತ್ತಾರೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಎಚ್ಚರಿಸಿದರು.ಬಿಜೆಪಿ ಜನ ವಿರೋಧಿ ನಿಲುವನ್ನು ಅನುಸರಿಸುತ್ತಿದೆ. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ, ಜನರಿಗೆ ವಿಬಿ-ಜಿ ರಾಮ್ ಜಿ ಮಾರಕವಾಗಿದೆ. ಬೂತ್ ಮಟ್ಟದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಜನ ಜಾಗತಿ ಮೂಡಿಸಬೇಕು ಎಂದು ಒತ್ತಾಯಿಸಿದರು. ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲಿಂ ಅಹಮದ್ ಮಾತನಾಡಿ, ಕೇಂದ್ರ ಸರ್ಕಾರ ರೂಪಿಸಿರುವ ಬದಲಾವಣೆಯನ್ನು ಖಂಡಿಸುತ್ತೇವೆ. ಈ ಮೂಲಕ ಕೇಂದ್ರ ಸರ್ಕಾರ ದೊಡ್ಡ ಷಡ್ಯಂತ್ರ ನಡೆಸಿದೆ. ಜವಹಾರ್ ಲಾಲ್ ನೆಹರು, ಇಂದಿರಾಗಾಂಧಿ, ರಾಜೀವ್ ಗಾಂಧಿ ಹೆಸರಿನ ಯೋಜನೆಗಳನ್ನು ಬದಲಾವಣೆ ಮಾಡಲಾಗಿದೆ.

## ಜಿಲ್ಲಾ ಉತ್ಸವದ ಜ್ಯೋತಿ ರಥಯಾತ್ರೆಗೆ ಸ್ವಾಗತ



**ನೈಜ್ಯ ದೇಸೆ ನ್ಯೂಸ್**

ಲಿಂಗಸಗೂರು: ರಾಯಚೂರು ಜಿಲ್ಲೆಯ "ಎಡೆದೊರೆ ನಾಡು-ಜಿಲ್ಲಾ ಉತ್ಸವ 2026"ರ ಅಂಗವಾಗಿ, ಉತ್ಸವದ ಜ್ಯೋತಿ ರಥಯಾತ್ರೆಯು ಲಿಂಗಸಗೂರು ತಾಲೂಕಿಗೆ ಆಗಮಿಸಿದ್ದು, ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು ಭಾಗವಹಿಸಿ ಈ ಉತ್ಸವದ ಜ್ಯೋತಿ ರಥಯಾತ್ರೆಯನ್ನು ಸ್ವಾಗತಿಸಿದರು.

## ಭವಿಷ್ಯ ರೂಪಿಸುವ ಶಕ್ತಿಶಾಲಿ ಅಸ್ತ್ರವೇ ಶಿಕ್ಷಣ ವಿನಯ್ ಕುಮಾರ್



**ನೈಜ್ಯ ದೇಸೆ ನ್ಯೂಸ್**

**ಲಿಂಗಸಗೂರು: ಶಿಕ್ಷಣವು ಒಬ್ಬ ವ್ಯಕ್ತಿಯ ಭವಿಷ್ಯ ರೂಪಿಸುವ ಶಕ್ತಿಶಾಲಿ ಅಸ್ತ್ರವಾಗಿದೆ. ಶಿಕ್ಷಣವು ಕೇವಲ ಅಕ್ಷರ ಜ್ಞಾನವಲ್ಲ, ಬದಲಾಗಿ ವ್ಯಕ್ತಿತ್ವ ವಿಕಸನ, ಮೌಲ್ಯಗಳ ಕಲಿಕೆ ಮತ್ತು ಯಶಸ್ವಿ ಜೀವನಕ್ಕೆ ಭದ್ರ ಬುನಾದಿಯಾಗಿದೆ ಎಂದು ಶ್ರೀ ಉಮಾಮಹೇಶ್ವರಿ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ವಿನಯಕುಮಾರ ಗಣಾಚಾರಿ ಹೇಳಿದರು.**

ಅವರಿಂದು ಉಮಾಮಹೇಶ್ವರಿ ಕಾಲೇಜಿನಲ್ಲಿ ಜ್ಯೂನಿಯರ್ ಜೇನಿಯಸ್ ಅವಾರ್ಡ ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಣವು ಜ್ಞಾನ, ಕೌಶಲ್ಯ, ಮೌಲ್ಯಗಳು ಮತ್ತು ಅಭ್ಯಾಸಗಳನ್ನು ಕಲಿಯುವ ಪ್ರಕ್ರಿಯೆಯಾಗಿದೆ. ಇದು ವ್ಯಕ್ತಿಗಳು ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಲು ಸಹಾಯ ಮಾಡುತ್ತದೆ, ಭವಿಷ್ಯದ ಸವಾಲುಗಳಿಗೆ ಅವರನ್ನು ಸಿದ್ಧಪಡಿಸುತ್ತದೆ ಮತ್ತು ಸಮಾಜದ ಪ್ರಗತಿಯನ್ನು ರೂಪಿಸುತ್ತದೆ ಎಂದು ಹೇಳಿದರು. ವಿಜ್ಞಾನ ವಿಭಾಗದ ಪ್ರಾಚಾರ್ಯ ಜಿ.ವಿ.ಸುರೇಶ ಮಾತನಾಡಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ನಮ್ಮ ನಮ್ಮ ಯೋಚನಾ ಶಕ್ತಿಯನ್ನು ಕಾಲಕ್ಕೆ ತಕ್ಕಂತೆ ಹೆಚ್ಚಿಸಿಕೊಳ್ಳಬೇಕು.

ಮತ್ತು ಕಾಲಕ್ಕೆ ತಕ್ಕಂತೆ ಹೊಸ ಹೊಸ ಅವಿಷ್ಕರದತ್ತ ಮುನ್ನುಗ್ಗಬೇಕು. ಚಿಕ್ಕಂದಿನಿಂದಲೆ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಉಪನ್ಯಾಸಕಿ ಶಶಿರೇಖಾ, ಮುಖ್ಯೋಪಾದ್ಯಾಯ ಸುವರ್ಣ ತೋಟದ ಸೇರಿದಂತೆ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಇದ್ದರು.

## ಮಸ್ಕಿ ಪೊಲೀಸ್ ಠಾಣೆಯಲ್ಲಿ ಬಹಿರಂಗ ಹರಾಜು: ಹಳೆಯ ಪಿಸಿ ವಸತಿಗೃಹಗಳಿಗೆ 99 ಸಾವಿರ ಬಿಡ್: ಬಿ. ನಾಗರಾಜ್‌ಗೆ ಲಾಟ್

**ನೈಜ್ಯ ದೇಸೆ ನ್ಯೂಸ್**

**ಮಸ್ಕಿ: ರಾಯಚೂರು ಜಿಲ್ಲೆಯ ಮಸ್ಕಿ ಪೊಲೀಸ್ ಠಾಣೆಯ ಹಳೆಯ ಪಿಸಿ ವಸತಿಗೃಹಗಳನ್ನು ನೆಲಸಮಗೊಳಿಸುವ ಸಂಬಂಧ ಬೆಂಗಳೂರು ಪ್ರಧಾನ ಪೊಲೀಸ್ ಕಚೇರಿ ಆದೇಶದಂತೆ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಈ ಆದೇಶದಂತೆ ಇಂದು ದಿನಾಂಕ 02ರಂದು ಬೆಳಗ್ಗೆ 11 ಗಂಟೆಗೆ ಮಸ್ಕಿ ಪೊಲೀಸ್ ಠಾಣೆ ಆವರಣದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ನಡೆಯಿತು.**

ಹರಾಜಿನಲ್ಲಿ ಒಟ್ಟು 7 ಜನ ಆಸಕ್ತ ಬಿಡ್‌ದಾರರು ಭಾಗವಹಿಸಿದ್ದು, ಸರ್ಕಾರಿ ನಿಗದಿತ ಬೀಟ್ ಮೊತ್ತ 90,500 ಆಗಿತ್ತು. ತೀವ್ರ ಸ್ಪರ್ಧೆಯ ನಡುವೆ ಬಿ. ನಾಗರಾಜ್ ಅವರು 99,000 ಮೊತ್ತಕ್ಕೆ ಅಂತಿಮ ಬಿಡ್ ಸಲ್ಲಿಸಿ ಹರಾಜನ್ನು ತಮ್ಮ ಹೆಸರಿಗೆ ಪಡೆಯುವಲ್ಲಿ ಯಶಸ್ವಿಯಾದರು. ಹರಾಜು ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿ ಹಾಗೂ ನಿಯಮಾನುಸಾರ ನಡೆಯಿತು ಎಂದು ಪೊಲೀಸ್ ಇಲಾಖೆ ತಿಳಿಸಿದೆ. ಮುಂದಿನ ದಿನಗಳಲ್ಲಿ ಹಳೆಯ ವಸತಿಗೃಹಗಳನ್ನು ನೆಲಸಮಗೊಳಿಸಿ ಹೊಸ ನಿರ್ಮಾಣ ಕಾರ್ಯಕ್ಕೆ ಅವಕಾಶ ಕಲ್ಪಿಸಲಾಗುವುದು ಎನ್ನಲಾಗಿದೆ.





## ರೈಲ್ವೆಗೆ ದಾಖಲಾರ್ಹ ಅನುದಾನ ನೀಡಿರುವ ಬಜೆಟ್ ಸ್ವಾಗತಾರ್ಹ: ಡಾ.ಬಾಬುರಾವ್

**ನೈಜ್ಯ ದೇಸೆ ನ್ಯೂಸ್**

**ರಾಯಚೂರು: ಕೇಂದ್ರ ವಿತ್ತ ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026-27 ನೇ ಸಾಲಿನ ಆಯ- ವ್ಯಯದಲ್ಲಿ ರೈಲ್ವೆ ಇಲಾಖೆಗೆ ಬಂಪರ್ ಕೊಡುಗೆ ನೀಡಿರುವುದು ಒಳ್ಳೆಯ ಬೆಳವಣಿಗೆ ಎಂದು ರೈಲ್ವೆ ಸಲಹಾ ಮಂಡಳಿಯ ಮಾಜಿ ಸದಸ್ಯ ಡಾ.ಬಾಬುರಾವ್ ಹರ್ಷ ವ್ಯಕ್ತಪಡಿಸಿದ್ದಾರೆ.**

ಬಜೆಟ್ ಕುರಿತು ಪ್ರತಿಕ್ರಿಯೆ ನೀಡಿರುವ ಅವರು ರೈಲ್ವೆ ಇಲಾಖೆಗೆ ರೂ.2.93 ಲಕ್ಷ ಕೋಟಿ ಒದಗಿಸಿದ್ದಲ್ಲದೆ 7 ಹೊಸ ಸೂಪರ್ ಫಾಸ್ಟ್ ರೈಲು ಓಡಿಸಲು ಮುಂದಾಗಿರುವುದು. ಅದರಲ್ಲಿ ಎರಡು ರೈಲುಗಳು ರಾಜ್ಯಕ್ಕೆ ಸಿಕ್ಕಿರುವುದು ಸಂತಸದ ವಿಚಾರವಾಗಿದೆ.ಇದರಲ್ಲಿ



ಕಲ್ಯಾಣ ಕರ್ನಾಟಕಕ್ಕೂ ಪಾಲು ಸಿಕ್ಕಿದ್ದು ಖುಷಿಯ ವಿಷಯವಾಗಿದೆ ಎಂದರು. ಕರ್ತವ್ಯ ಮಂತ್ರದೊಂದಿಗೆ ದೇಶದ ವಿಕಸಿತದ ಗುರಿ ಹೊಂದಿರುವ ಬಜೆಟ್ ಸ್ವಾಗತಾರ್ಹವಾಗಿದೆ ಎಂದು ತಿಳಿಸಿದ್ದಾರೆ.

ಆಶಾದಾಯಕ ಬಜೆಟ್ ಇದಾಗಿದ್ದು, ವಿದೇಶಗಳಿಗೆ ಪ್ರಯಾಣಿಸುವ ಭಾರತೀಯರ ಮೇಲಿನ ತೆರಿಗೆಯನ್ನು ಪ್ರತಿಶತ ಎರಡರಷ್ಟು ಕಡಿಮೆ ಮಾಡಿದ್ದಾರೆ. ಮಾರ್ಚ್ 31ರವರೆಗೆ ಟ್ಯಾಕ್ಸ್ ಫೈಲ್ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಬೆಂಗಳೂರು ಹೈದರಾಬಾದ್, ಬೆಂಗಳೂರು ಚೆನ್ನೈ ಹೈಸ್ಪೀಡ್ ಕಾರಿಡಾರ್ ನೀಡಿದ್ದಾರೆ. ಸಿಗರೇಟ್ ಮತ್ತು ಔಷಧಗಳ ಮೇಲೆ ತೆರಿಗೆ ಕಡಿಮೆ ಮಾಡುವ ಮೂಲಕ ಜನರಿಗೆ ಅಗ್ಗ ಮಾಡಿದ್ದಾರೆ. ಬಡವರ ಪರವಾದ, ಆಶಾದಾಯಕ ಬಜೆಟ್ ಇದಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

## ಸ್ವಾತಂತ್ರ್ಯಯವನ್ನು ನೀಡಿದ ಮಹಾನಿಯರಿಗೆ ನಾವು ಗೌರವ ದೊರೆಯುವಂತೆ ಬದುಕನ್ನು ರೂಪಿಸಿಕೊಳ್ಳಿ: ಕಲ್ಮಠ ಶ್ರೀ

**ನೈಜ್ಯ ದೇಸೆ ನ್ಯೂಸ್**

**ಮಾನ್ವಿ: ಪಟ್ಟಣದ ಟಿಎಪಿಸಿಎಂಸಿ ಬಯಲು ಆವರಣದಲ್ಲಿ ಮಾನ್ವಿ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ನಡೆದ ಬೃಹತ್ ಹಿಂದೂ ಶೋಭಾಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡೀತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆರ್ಶೀವಾಚನ ನೀಡಿ ನಮ್ಮ ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿ ಸ್ವಾತಂತ್ರ್ಯಯವನ್ನು ನೀಡಿದ ಮಹಾನಿಯರಿಗೆ ನಾವು ಗೌರವ ದೊರೆಯುವಂತೆ ನಾವು ಸ್ವತಂತ್ರ ದೇಶದಲ್ಲಿ ಬದುಕಬೇಕಾಗಿದೆ ಅದ್ದರೆ ನಾವೇ ಸ್ವತಃ ಭ್ರಷ್ಟರಾದಗ ರಾಷ್ಟ್ರವನ್ನು ನಿರ್ಮಾಣ ಮಾಡುವುದಾದರು ಹೇಗೆ ನಮ್ಮ ಅಮೂಲ್ಯವಾದ ಮತವನ್ನು ಹಣಕ್ಕಾಗಿ ಮಾರಿಕೊಂಡಲ್ಲಿ ಭ್ರಷ್ಟಚಾರವನ್ನು ನಿರ್ಮೂಲನೆ ಮಾಡುವುದಾದರು.**

ಹೇಗೆ ವಿಶ್ವದಲ್ಲಿ ಬಲಿಷ್ಟ ರಾಷ್ಟ್ರವನ್ನು ಕಟ್ಟುವುದಾದರು ಹೇಗೆ ಅದ್ದರಿಂದ ಮೊದಲು ನಾವು ಸರಿಯಾಗ ಬೇಕಾದಲ್ಲಿ ಇಂದು ನಾವು ಮತವನ್ನು ಹಣ ಪಡೆಯದೆ ಅರ್ಹ ವ್ಯಕ್ತಿಗೆ ಮಾತ್ರ ಮತ ಹಾಕುತ್ತೇನೆ,



ಲಂಚವನ್ನು ನೀಡದೆ ಸರ್ಕಾರಿ ಕಚೇರಿಗಳಲ್ಲಿ ನಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತೇವೆ,ನಾವು ಎಂದಿಗೂ ತೆರಿಗೆಯನ್ನು ವಂಚನೆ ಮಾಡುವುದಿಲ್ಲ ಪರಿಸರಕ್ಕೆ ಪ್ರತಿವರ್ಷ ಗಿಡಗಳನ್ನು ನೇಡುತ್ತೇನೆ ಸ್ವಾಭಿಮಾನ,ಧೈರ್ಯದಿಂದ ನಮ್ಮ ಹಿಂದೂ ಪರಂಪರೆಯ ಬಗ್ಗೆ ಹೆಮ್ಮೆ ಪಟ್ಟುಕೊಂಡು, ದೇಶಕ್ಕಾಗಿ ನಾನೇನು ಕೋಡಬಲ್ಲೇ ಎನ್ನುವ ಅಸ್ಮಿತೆಯ ನಡುವೆ ನಾವು ನಮ್ಮ ಬದುಕನ್ನು ಕಟ್ಟಿಕೊಳ್ಳುತ್ತೇವೆ ಎನ್ನುವ ಸಂಕಲ್ಪವನ್ನು ಯುವ ಸಮುದಾಯ ಹೊಂದಿದಾಗ ಮಾತ್ರ ಭಾರತ ವಿಶ್ವಗುರುವಾಗುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಚೀಕಲಪರ್ವಿ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಆರ್ಶೀವಾಚನ ನೀಡಿ ನಮ್ಮ ಹಿರಿಯರು ಪ್ರತಿಯೊಂದು ಹಬ್ಬ ,ಆಚರಣೆಗಳನ್ನು,ಉತ್ಸವಗಳನ್ನು ,ಜಾತ್ರೆಗಳನ್ನು ವೈಜ್ಞಾನಿಕ ಅಂಶಗಳನ್ನಿಟ್ಟು ಕೊಂಡು ರೂಪಿಸಿದ್ದಾರೆ ನಮ್ಮ ಹಿಂದೂ ಧರ್ಮದ ಆಚರಣೆಗಳು ಸಮಾಜದಲ್ಲಿ ಸೌಹಾರ್ಧತೆಮ ಭಾವೈಕ್ಯತೆಯನ್ನು ಮೂಡಿಸುತ್ತ ಬಂದಿವೇ ಅಧುನಿಕತೆಯ ಹೆಸರಿನಲ್ಲಿ ನಮ್ಮ ಆಚರಣೆಗಳ ಮಹಾತ್ವವನ್ನು ತಿಳಿಯದೆ ಟೀಕಿಸುವವರು ಮೋದಲು ನಮ್ಮ ಆಚರಣೆಗಳ ಮಹತ್ವ ಹಾಗೂ ಹಿನ್ನೆಲೆಗಳನ್ನು,ಉದ್ದೇಶಗಳನ್ನು ನಾವು ತಿಳಿಸಿಕೊಡಬೇಕಾಗಿದೆ. ನಮ್ಮ ದೇಶದ ಯಾವುದೇ ಭೂಮಿಯಲ್ಲಿ ಅಸಗೆದರು ಕೂಡ ನಮ್ಮಗೆ ಶಿವಲಿಂಗ ದೊರೆಯುವುದಕ್ಕೆ ನಮ್ಮ ಹಿರಿಯರ ಭಕ್ತಿ ,ಆಚರಣೆಗಳೆ ಕಾರಣ ಎಂದು ತಿಳಿಸಿದರು.

ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಬಾಗಲವಾಡ ಶಿವಯ್ಯಸ್ವಾಮಿಗಳು,ಸುವರ್ಣಗಿರಿ ಮಠದ ಶಂಕರಯ್ಯಸ್ವಾಮಿಗಳು ಆರ್ಶೀವಾಚನ ನೀಡಿದರು. ಮಾನ್ವಿ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷರಾದ ನೀಲಕಂಠಪ್ಪ ಮಾತನಾಡಿದರು. ರಾಷ್ಟ್ರೀಯ ಸ್ವಯಂ ಸೇವ ಸಂಘದ ಜಿಲ್ಲಾ ಪ್ರ. ಕಾರ್ಯವಾಹರಾದ ರಾಜೇಂದ್ರ ಮುತ್ತಿನ ಗೌಡ ಹರವಿ ದಿಕ್ಸೂಚಿ ಭಾಷಣದಲ್ಲಿ ಮಾತನಾಡಿ ರಾಷ್ಟ್ರೀಯ ಸ್ವಯಂ ಸೇವ ಸಂಘವು ನೂರು ವರ್ಷಗಳಿಂದ ರಾಷ್ಟ್ರೀಯ ವಿಚಾರಗಳನ್ನು ಇಟ್ಟುಕೊಂಡು ತಮ್ಮ ಕಾರ್ಯಕರ್ತರ ಮೂಲಕ ದೇಶದ ಮನೆ ಮನೆಗೆ ನಮ್ಮ ರಾಷ್ಟ್ರೀಯತೆಯ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ದೇಶದಲ್ಲಿ ಲಕ್ಷಕೂ ಹೆಚ್ಚು ಹಿಂದೈ ಸಮವೇಶಗಳನ್ನು ಅಯೋಜಿಸುವಮೂಲಕ ರಾಷ್ಟ್ರ ಪ್ರೇಮವನ್ನು ಜಾಗೃತಗೊಳಿಸುತ್ತಿದೆ.

ವಿಶ್ವಗುರುವಾಗುವುದಕ್ಕೆ ನಮ್ಮ ಭಾರತ ದೇಶದಿಂದ ಮಾತ್ರ ಸಾಧ್ಯ ಎಕೆಂದರೆ ಎರಡುಸಾವಿರ ವರ್ಷಗಳ ಪರಕಿಯರ ದಾಳಿಯ ನಂತರವು ನಮ್ಮ ಹಿಂದೂ ಧರ್ಮವನ್ನು,ಸನಾತನ ಪರಂಪರೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಹಿಂದೂಗಳಿಂದ ಮಾತ್ರ ಸಾಧ್ಯವಾಗಿದೆ. ವಿಶ್ವವೇ ಇಂದು ನಮ್ಮ ಪರಂಪರೆಯನ್ನು ಗೌರವಿಸುತ್ತಿದೆ. ವಿಶ್ವದ ಎಲ್ಲ ಸಮುದಾಯಗಳನ್ನು ಪ್ರೀತಿಸುವ ,ಆಶ್ರಯವನ್ನು ನೀಡುವ ಹಿಂದೂಗಳ ಪರಿಸ್ಥಿತಿ ವಿದೇಶಗಳಲ್ಲಿ ಶೋಚನಿಯವಾಗಿದೆ. ಅದ್ದರಿಂದ ನಾವೇಲ್ಲ ಒಂದು ನಾವೇಲ್ಲ ಹಿಂದೂ, ಎಂದಾಗ ಮಾತ್ರ ನಮ್ಮ ಹಿಂದೂ ಧರ್ಮ ಉಳಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

## ಸಾಹಿತ್ಯ ಸಿಂಚನ

ಕಾಡುವ ಕವಿತೆ.!

ಕವಿತೆಯೆಂದರೆ ಹಾಗೆ..
ಕದಡಬೇಕು ಅವಳಂತೆ.....
ದಿನನಿತ್ಯದ ಜಪದಂತೆ.!
ನಿರಂತರದ ತಪದಂತೆ.!

ಕವಿತೆಯೆಂದರೆ ಹಾಗೆ..
ಕಲಕಬೇಕು ಅವಳಂತೆ....
ನೆನಪುಗಳ ಜ್ವಾಲೆಯಂತೆ.!
ಕನಸುಗಳ ಮಾಲೆಯಂತೆ.!

ಕವಿತೆಯೆಂದರೆ ಹಾಗೆ..
ಕಂಪಿಸಿಸಬೇಕು ಅವಳಂತೆ.....
ಚಿತ್ತ ಚಿತ್ತಾರವಾಗಿಸುವಂತೆ.!
ಒಡಲು ಭೋರ್ಗರೆವಂತೆ.!

ಕವಿತೆಯೆಂದರೆ ಹಾಗೆ..
ಕನಲಿಸಬೇಕು ಅವಳಂತೆ.....
ಹಗಲಲ್ಲು ಮೈಮರೆಸುವಂತೆ.!
ಇರುಳಲ್ಲು ಎದ್ದುಕೂಡುವಂತೆ.!

ಕವಿತೆಯೆಂದರೆ ಹಾಗೆ..
ಕಂಗೆಡಿಸಬೇಕು ಅವಳಂತೆ.....
ಕ್ಷಣಕ್ಷಣಕೂ ಕಾತರಿಸುವಂತೆ.!
ಹಂಬಲಿಸಿ ಹಾತೊರೆಯುವಂತೆ.!

ಕವಿತೆಯೆಂದರೆ ಹಾಗೆ...
ಕನವರಿಸಿಸಬೇಕು ಅವಳಂತೆ...
ಕನಸಲ್ಲೂ ಕಣ್ಣರಳಿಸುವಂತೆ.!
ಕಣಕಣವು ಅನುರಣಿಸುವಂತೆ.!

ಕವಿತೆಯೆಂದರೆ ಹಾಗೆ..
ಕಾಡಬೇಕು ಅವಳಂತೆ.....
ಮತ್ತೆಮತ್ತೆ ನೆನೆಯುವಂತೆ.!
ನರ-ನರ ನವಿರೇಳುವಂತೆ.!

ಕವಿತೆಯೆಂದರೆ ಹಾಗೆ..
ಕರೆಯಬೇಕು ಅವಳಂತೆ...
ಪದೇಪದೇ ಪುಳಕಿಸುವಂತೆ
ಸ್ವರ-ಸ್ವರ ಸ್ಮರಿಸುವಂತೆ.!

ಕವಿತೆಯೆಂದರೆ ಹಾಗೆ..
ಕಲ್ಲಾಗಿಸಬೇಕು ಅವಳಂತೆ
ಕಾಲವನೇ ಮೈಮರೆಸುವಂತೆ
ಧಮನಿ-ಧಮನಿ ದೇದೀಪ್ಯವಾಗುವಂತೆ.!

ಎ.ಎನ್.ರಮೇಶ್. ಗುಬ್ಬಿ.

## ಗೃಹಲಕ್ಷ್ಮಿ ನೊಂದಣಿಗೂ ಈಗಲೂ ಅವಕಾಶ

**ಚಿರಾಯು ಜ್ಞಾನಿ ಸುದ್ದಿ ಜಾಲ ಬೆಂಗಳೂರು:** ಗೃಹಲಕ್ಷ್ಮಿ ಯೋಜನೆಗೆ ಈಗಲೂ ಫಲಾನುಭವಿಗಳು ಹೆಸರು ನೊಂದಾಯಿಸಲು ಅವಕಾಶ ಮಾಡಿಕೊಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಮೇಲ್ಮನೆಯಲ್ಲಿ ಇಂದು ತಿಳಿಸಿದರು.



ರಾಜ್ಯಪಾಲರ ಭಾಷಣ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಮಾತನಾಡುವ ವೇಳೆ ಮಧ್ಯಪ್ರವೇಶಿಸಿದ ಸಚಿವರು ಆದಾಯ ತೆರಿಗೆ ಪಾವತಿ ಹಾಗೂ ಜಿಎಸ್ ಟಿ ಪಾವತಿ ಹೊರತುಪಡಿಸುವ ಮಹಿಳೆಯರು ಹೊರತುಪಡಿಸಿ ಇತರೆ ಮಹಿಳೆಯರು ಈಗಲೂ ತಮ್ಮ ಹೆಸರನ್ನು ಗೃಹಲಕ್ಷ್ಮಿ ಯೋಜನೆಗೆ ನೊಂದಾಯಿಸಿಕೊಳ್ಳಬಹುದು ಎಂದು ಹೇಳಿದರು.

# ಮಕ್ಕಳ ಹಬ್ಬದಲ್ಲಿ ಗಮನ ಸೆಳೆದ ಬಾಲ್ಯ ವಿವಾಹ ಮುಕ್ತಿ ರಥ ವಾಹನ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಫೆಬ್ರವರಿ 02 (ಕರ್ನಾಟಕ ವಾರ್ತೆ): ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026 ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಫೆ.2ರಂದು ಆಯೋಜಿಸಿದ್ದ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಬಾಲ್ಯ ವಿವಾಹ ಮುಕ್ತಿ ರಥ ವಾಹನ ಗಮನ ಸೆಳೆಯಿತು.**







ನಾವೆಲ್ಲರೂ ಒಟ್ಟಾಗಿ ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಮಾಡೋಣ. ಎಲ್ಲಾ ಮಕ್ಕಳು ತಮ್ಮ ಹಕ್ಕುಗಳು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಕೆಲಸ ಮಾಡೋಣ ಎನ್ನುವ ಸಂದೇಶ ಹೊತ್ತ ಜಾಗೃತಿ ವಾಹನವು ಜಿಲ್ಲಾ ಕ್ರೀಡಾಂಗಣದ ವಿವಿಧೆಡೆ ಸಂಚರಿಸಿತು. ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ಸೇ-ರಿರುವ ಕಾರ್ಯಕ್ರಮದಲ್ಲಿ ಸಂಚಾರಿ ಜಾಗೃತಿ ರಥ ವಾಹನದ ಮೂಲಕ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಲಾಯಿತು. ಮಕ್ಕಳಿಗೆ ಸುರಕ್ಷಿತ ಸ್ಪರ್ಶ, ಅಸುರಕ್ಷಿತ ಸ್ಪರ್ಶ, ಮಕ್ಕಳ ಸಹಾಯವಾಣಿ ಸಂಖ್ಯೆ: 1098 ಹಾಗೂ ಪೋಕ್ಸೋ ಕಾಯ್ದೆ ಕುರಿತು ಕರಪತ್ರ ಹಂಚುವ ಮೂಲಕ ಹಾಗೂ ವೇದಿಕೆಯ ಮುಂಭಾಗದಲ್ಲಿ ಸೆಲ್ಫಿ ಸ್ಟ್ಯಾಂಡ್ ಇಟ್ಟು ಜಾಗೃತಿ ಮೂಡಿಸಲಾಯಿತು.

ಬಾಲ್ಯ ವಿವಾಹ ನಿಷೇಧ ಕು-ರಿತು ಆಡಿಯೋ ಜಿಂಗಲ್ಸ್ ಮೂಲಕವೂ ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ವಾಹನಕ್ಕೆ ಜಿಲ್ಲಾಧಿಕಾ-ರಿಗಳಾದ ನಿತೀಶ್ ಕೆ ಅವರು ಚಾಲನೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ ಕುಮಾರ್ ಕಾಂದೂ, ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮಹಾಪಾತ್ರ, ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಅಮರೇಶ್ ಹಾವಿನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶರಣಮ್ಮ, ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷ ಈರಮ್ಮ ಹಾಗೂ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಕರ್ನಾಟಕದ ಹಿತಾಸಕ್ತಿಗಳನ್ನು ಕಡೆಗಣಿಸಿದ ಒಕ್ಕೂಟ ಸರ್ಕಾರ ಬಜೆಟಿನಲ್ಲಿ ಹಳೆಯದನ್ನು ಹೊಸದೆಂದು ಬಿಂಬಿಸುವ ಪ್ರಯತ್ನವಾಗಿದೆ

**ನೈಜ್ಯ ದೆಸೆ ನ್ಯೂಸ್**



**ಒಕ್ಕೂಟ ಸರ್ಕಾರದ ಆಯವ್ಯಯವು ರಾಜ್ಯದ ಜನತೆಗೆ ಸಂಪೂರ್ಣವಾಗಿ ನಿರಾಶದಾಯಕವಾಗಿದೆ ಮತ್ತು ಒಟ್ಟಾರೆಯಾಗಿ ಒಂದು ಸಾಮಾನ್ಯ ಬಜೆಟ್. ಇಡೀ ವಿಶ್ವವೇ ಗೊಂದಲಮಯ ವಾತಾವರಣದಲ್ಲಿ ಮುಳುಗಿರುವಂತಹ ಸಂದರ್ಭದಲ್ಲಿ, ದೇಶವನ್ನು ಮುನ್ನೆಡೆಸುವ ಹಾಗೂ ರಕ್ಷಿಸುವ ಯಾವುದೇ ಕ್ರಮಗಳು ಕಂಡುಬರುತ್ತಿಲ್ಲ ಎಂದು ಕೆ ಆರ್ ಎಸ್ ಪಕ್ಷದ ರಾಜ್ಯ ರೈತ ಘಟಕದ ಕಾರ್ಯದರ್ಶಿ ನಿರುಪಾದಿ ಕೆ ಗೋಮರ್ಸಿ ಪತ್ರಿಕೆ ಹೇಳಿಕೆಯನ್ನು ನೀಡಿ ಮಾತನಾಡಿದರು.**

ಸಂಕಷ್ಟದ ಸಂದರ್ಭದಲ್ಲಿ, ಸ್ಪಷ್ಟ ಹಾಗು ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ, ಆದ-'ರೆ ಯಾವುದೇ ಸ್ಪಷ್ಟತೆಯಿಲ್ಲದ ಮೇಲ್ಸ್ತರದಲ್ಲಿನ ಘೋಷಣೆಗಳಂತೆ ಬಹುತೇಕ ಕಂಡುಬರುತ್ತಿದ್ದು, ರೈತರ ಆದಾಯ ಹೆಚ್ಚಿಸುವ ಬಗ್ಗೆ ಹಾಗು ಯುವ ಶಕ್ತಿಯ ಬಗ್ಗೆ ಮಾತನಾಡಲಾಗಿದೆ, ಆದ-'ರೆ ಉದ್ಯೋಗ ಸೃಷ್ಟಿಯ ಬಗ್ಗೆಯಾಗಲಿ ಅಥ-'ವಾ ರೈತರ ಸಮಸ್ಯೆ ಬಗೆಹರಿಸಲು ಯಾವುದೇ ನಿರ್ದಿಷ್ಟ ಕ್ರಮಗಳು ಕಂಡುಬರುತ್ತಿಲ್ಲ. ಈ ಹಿಂದಿನ ಅನೇಕ ಘೋಷಣೆಗಳು ಕೇವಲ ಘೋಷಣೆಗಳಾಗಿ ಮಾತ್ರ ಉಳಿದಿವೆ.

ಘೋಷಣೆಗಳನ್ನು ಕಾರ್ಯಗತ ಮಾಡಲು ಸಂಪೂರ್ಣ ನಿರ್ಲಕ್ಷ ವಹಿಸಲಾಗಿದೆ. ಕರ್ನಾಟಕವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಂತಹ ರೀತಿಯಲ್ಲಿ ಬಜೆಟ್ ಇದ್ದು, ರಾಜ್ಯದ ಜನರ ನಿರೀಕ್ಷೆಯನ್ನು ಸಂಪೂರ್ಣವಾಗಿ ಹುಸಿಗೊಳಿಸಿದ್ದು,

# ಸಂಕೇತ ಕಾಲೇಜಿನಿಂದ ಫೆ.7ಕ್ಕೆ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಅಪೂರ್ವ ಸಂಗಮ ಕಾರ್ಯಕ್ರಮ




**ನೈಜ್ಯ ದೆಸೆ ನ್ಯೂಸ್**

**ಸಂಕೇತ ಪದವಿ ಪೂರ್ವ ಹಾಗೂ ಪದವಿ ಕಾಲೇಜು ಸಿಂಧನೂರು ಇವರಿಂದ ಫೆ.7 ರಂದು ಮಧ್ಯಾಹ್ನ 3ಕ್ಕೆ ನಗರದ ಸತ್ಯಗಾರ್ಡನ್ ನಲ್ಲಿ "ಅಪೂರ್ವ ಸಂಗಮ' ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಕೇತ ಕಾಲೇಜಿನ ಕಾರ್ಯದರ್ಶಿ ಅನಿಲರಾಜ್ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಸೋಮವಾರದಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಮೊದಲು ಪಾಠ ಮಾಡಿ ಬಿಟ್ಟು ಹೋದ ಶಿಕ್ಷಕರಿಗೂ, ಹಾಗೂ ಕಲಿತು ಹೋದ ಹಳೆಯ ವಿದ್ಯಾರ್ಥಿಗಳನ್ನು ಸಹ ಈ ಸ್ನೇಹ ಸಮ್ಮಿಲನ ಕಾರ್ಯಕ್ರಮಕ್ಕೆ ಕರೆದು ಸನ್ಮಾನಿಸಿ ಗೌರವಿಸುವ ಕೆಲಸ ಮಾಡುತ್ತೇವೆ. ಬೆಂಗಳೂರಿನ ಕೆ.ಎಫ್ ಸಿಸಿಐನ ತ್ರಿವಿಕ್ರಮ ಜೋಷಿ, ಸ್ಥಳೀಯ ಬಿಜೆಪಿ ಮುಖಂಡರು ಭಾಗವಹಿಸಲಿದ್ದಾರೆ. ಆರ್.ಜಿ.ಎಮ್.ಶಾಲೆಯ ಅಧ್ಯಕ್ಷರು ಹಾಗೂ ನೇತ್ರತಜ್ಞ ಡಾ.ಚನ್ನನಗೌಡ ಮುಖ್ಯ ಅತಿಥಿಗಳಾಗಿ ಆಗಮಿಸುವರು ಸರ್ಟಿಫೈಡ್ ಲಿಮ್ರಾ ಇಂಟರ್ನ್ಯಾಷನಲ್ ಸ್ಪೆಷಿಲಿಟೇಟರ್ ಅಮೇರಿಕಾ ಇವರು ಮುಖ್ಯ ಭಾಷಣಕಾರರಾಗಿ ಆಗಮಿಸುವರು, ಮಧ್ಯಾಹ್ನ 3 ರಿಂದ 6 ರವರೆಗೆ ವಿದ್ಯಾರ್ಥಿಗಳಿಗಾಗಿ ಫನ್ ಗೇಮ್ಸ್ ಆಡಿಸಲಾಗುವುದು, 6 ರಿಂದ 7:30 ರವರೆಗೆ ಉದ್ಘಾಟನೆ ಕಾರ್ಯಕ್ರಮ, ನಂತರ ಶಿಕ್ಷಕ-ರಿಗೆ ಸನ್ಮಾನ, 7:30 ರಿಂದ ರಾತ್ರಿ 9 ರವರೆಗೆ ಪವನಭಟ್ ಅವರಿಂದ ಲೈವ್ ಮ್ಯೂಸಿಕ್ ಬ್ಯಾಂಡ್ ಹಳೆಯ ಕನ್ನಡ ಗೀತೆಗಳ ಕಾರ್ಯಕ್ರಮ ನಡೆಯಲಿದೆ ರಾತ್ರಿ 9 ರಿಂದ 10 ರವರೆಗೆ ಊಟದ ಜೊತೆಗೆ ಚಿಟ್ ಚಾಟ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಈ ವೇಳೆ: ಪ್ರಾಚಾರ್ಯರಾದ ಬಸವರಾಜ ಬೊಮ್ಮನಾಳ, ದೀಪಕ್ ಎನ್.ತುರ್ವಿಹಾಳ, ಅಮರೇಶ ಅಲಬನೂರು, ಸಂಗಮೇಶ ಪಾಟೀಲ್, ವಿಶ್ವನಾಥ ಪತ್ತರ್, ವೆಂಕಟೇಶ ಭಂಡಾರಿ, ಸೇರಿದಂತೆ ಅನೇಕರಿದ್ದರು.

# ರಾಯಣ್ಣ ಮಡಿದ ಮರುದಿನವೇ ಮರೆಯಾದ ಶಬ್ದವೇದಿ ಚಾಣಕ್ಯ ವಡ್ಡರ ಯಲ್ಲಣ್ಣ: ಪ್ರಮೋದ ಭೋವಿವಡ್ಡರ



**ನೈಜ್ಯ ದೆಸೆ ನ್ಯೂಸ್**

**ಕಲಬುರಗಿ: ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವವನ್ನೆ ಬಲಿದಾನ ಮಾಡಿದ ವೀರ ಯೋಧರಲ್ಲೊಬ್ಬರಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಬಲಗೈ ಭಂಟ ವಡ್ಡರ ಯಲ್ಲಣ್ಣನವರು ಬಂಡ ಬ್ರಿಟಿಷರ ಗುಂಡಿಗೆ ಬಲಿದಾನವಾದ ದಿನವಾದ ಇಂದು ಸ್ವಾತಂತ್ರ್ಯ ಹೋರಾಟಗಾರರನ್ನು ಈ ಮಣ್ಣಿನ ಇತಿಹಾಸವನ್ನು ಎಲ್ಲೊ ಒಂದುಕಡೆ ಜನ ಮರೆಮಾಚುತ್ತಿದ್ದಾರೆ ಎಂದು ಸಿದ್ದರಾಮೇಶ್ವರ ಭೋವಿವಡ್ಡರ ಸಂಘದ ಅಧ್ಯಕ್ಷ ಪ್ರಮೋದ್ ಭೋವಿವಡ್ಡರ ಅಸಮಧಾನಗೊಂಡಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಮಡಿದ ಎಷ್ಟೋ ವೀರ ಸೇನಾನಿಗಳ ಹೆಸರು ನಾವುಗಳು ಮರೆಯುತ್ತಿದ್ದೆವೆ.ಏಕೆಂದರೆ ಕಿತ್ತೂರ ರಾಣಿ ಚೆನ್ನಮ್ಮ ರಾಣಿಯ ಆಸ್ಥಾನದಲ್ಲಿ ಸೇನಾನಿಯಾಗಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಬಲಗೈ ಬಂಟ ವಡ್ಡರ ಯಲ್ಲಣ್ಣ ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇ-ರಿಸಿದ ಮರುದಿನವೇ ಆತನ ಪ್ರಾಣವನ್ನು ಬ್ರಿಟಿಷರು ಮೋಸದಿಂದ ತಗೆದುಕೊಂಡರು.ಈ ಇತಿಹಾಸವನ್ನು ಇಂದಿನ ಆಧುನಿಕ ಯುವ ಪೀಳಿಗೆ ಎಲ್ಲೊ ಒಂದುಕಡೆ ಮರೆತು ಹೋಗುತ್ತಿದ್ದಾರೆ. ರಾಣಿ ಚೆನ್ನಮ್ಮ ತಾಯಿಯ ಆಸ್ಥಾನಕ್ಕೆ ಕುತ್ತು ಬರುವಂತಹ ಸ್ಥಿತಿಯಲ್ಲಿ ಬ್ರಿಟಿಷರು ದಾಳಿ ಮಾಡಲು ಕಿತ್ತೂರಿಗೆ ಬರುವ ಸೂಚನೆಯನ್ನು ವಡ್ಡರ ಯಲ್ಲಣ್ಣ ರಾಯಣ್ಣನಿಗೆ ತಿಳಿಸುತ್ತಿದ್ದ.

ಶಬ್ದವೇದಿ ವಿದ್ಯೆಯಲ್ಲಿ ಪರಿಣಿತಿ ಹೊಂದಿದ ಯಲ್ಲಣ್ಣ ಹತ್ತಾರು ಕಿಲೋಮೀಟ-ರ್ ದೂರದಲ್ಲಿ ಬರುತ್ತಿದ್ದ ಸಂಚುಕೋರರ ಸುಳಿವನ್ನು ಭೂಮಿಗೆ ಕಿವಿಗೊಟ್ಟು ಎಷ್ಟು ಸೈನ್ಯದೊಂದಿಗೆ ಬರುತ್ತಿದ್ದಾರೆ ಎನ್ನುವ ಸುಳಿವು ಕಂಡು ಹಿಡಿಯುತ್ತಿದ್ದ ಮಹಾನ ಶೂರ ವಡ್ಡರ ಯಲ್ಲಣ್ಣ.ಸುಮಾರು 8 ನೂರು ಜನ ತನ್ನ ಒಡನಾಡಿಗಳನ್ನು ಕಟ್ಟಿಕೊಂಡು ಸಂಗೊಳ್ಳಿ ರಾಯಣ್ಣನ ಬೆನ್ನಿಗೆ ನಿಂತ ವೀರ ಸೇನಾನಿ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಗುಂಡಿಗೆ ಬಲಿಯಾಗಿದ್ದಾನೆ.ಬೆಟ್ಟದಲ್ಲಿರುವ ಬಂಡೆಗಳನ್ನು ಒಡೆಯುವ ತಾಕತ್ತು ಹೊಂದಿದ್ದ ಯಲ್ಲಣ್ಣ ಬ್ರಿಟಿಷರ ಹತ್ತಾರು ಸೈನಿಕರನ್ನು ತನ್ನ ಕೈಗಳಿಂದ ಹೊಡೆದು ಬಲಿ ಪಡೆಯುತ್ತಿದ್ದ.

ದೇಶ ಹಾಗೂ ರಾಣಿ ಚೆನ್ನಮ್ಮಳ ಆಸ್ಥಾನದ ಉಳುವಿಗಾಗಿ ಹೋರಾಡಿ ಮಡಿದ ವಡ್ಡರ ಯಲ್ಲಣ್ಣ ತನ್ನ ಆತ್ಮೀಯ ಸ್ನೇಹಿತ ಸಂಗೊಳ್ಳಿ ರಾಯಣ್ಣನನ್ನು ತಮ್ಮವರಿಂದಲೆ ಮೋಸದಿಂದ ಹೊಂಚು ಹಾಕಿ ಬಂಧಿಸಿ ಗಲ್ಲಿಗೇರಿಸಿದ ಮರುದಿನವೇ ಶಬ್ದವೇದಿ ವಡ್ಡರ ಯಲ್ಲಣ್ಣನನ್ನು ಜೀವಂತ ಬಂಧಿಸಿ ಬ್ರಿಟಿಷರು ಪ್ರಾಣ ತಗೆದರು.ಹಿಂತಹ ಅದ್ಭುತ ಇತಿಹಾಸ ಉಳ್ಳ ಕಿತ್ತೂರಿನ ಕಟ್ಟಾಳುಗಳಲ್ಲಿ ಪ್ರಮುಖರಾದ ವಡ್ಡರ ಯಲ್ಲಣ್ಣನವರ ಚರಿತ್ರೆಯನ್ನು ನಾವುಗಳು ತಿಳಿದುಕೊಂಡು ಅವರ ಶೌರ್ಯವನ್ನು ನಾವು ಸ್ಮರಿಸುವಂತವರಾಗಬೇಕು ಎಂದರು.

# ರಿಮ್ಸ್‌ನಲ್ಲಿ 371(ಜೆ) ಉಲ್ಲಂಘನೆ ಸೇರಿ ಸ್ಥಳೀಯ ನೌಕರರ ಕಡೆಗಣನೆ ಅನ್ಯಾಯ ಸರಿಪಡಿಸದಿದ್ದರೆ ಹೋರಾಟದ ಎಚ್ಚರಿಕೆ: ಶಿವಕುಮಾರ ಮ್ಯಾಗಳಮನಿ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನಗರದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್)ಯಲ್ಲಿ ನಡೆಯುತ್ತಿರುವ ನೇಮಕಾತಿ ಹಾಗೂ ನಿಯೋಜನಾ ಪ್ರಕ್ರಿಯೆಯಲ್ಲಿ ಸಂವಿಧಾನದ 371(ಜೆ) ವಿಧಿಯನ್ನು ಗಾಳಿಗೆ ತೂರಿ ಕಲ್ಯಾಣ ಕರ್ನಾಟಕ ಪ್ರದೇಶದ ಉದ್ಯೋಗಿಗಳ ಮೇಲೆ ವ್ಯವಸ್ಥಿತವಾಗಿ ನಡೆಯುತ್ತಿರುವ ಅನ್ಯಾಯವನ್ನು ತಕ್ಷಣವೇ ನಿಲ್ಲಿಸದಿದ್ದರೆ ಹೋರಾಟಕ್ಕೆ ಇಳಿಯಲಾಗುವುದು ಎಂದು ವಕೀಲರು ಹಾಗೂ ಸಾಮಾಜಿಕ ಹೋರಾಟಗಾರರಾದ ಶಿವಕುಮಾರ ಮ್ಯಾಗಳಮನಿ ಅವರು ಪತ್ರಿಕಾ ಹೇಳಿಕೆಯ ಮೂಲಕ ಎಚ್ಚರಿಕೆ ನೀಡಿದ್ದಾರೆ.**

ಈ ಕುರಿತು ಅವರು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್ ರವರು ಮಧ್ಯಪ್ರವೇಶಿಸಿ ಕಲ್ಯಾಣ ಕರ್ನಾಟಕ ಭಾಗದ ಜನರ ಸಂವಿಧಾನಾತ್ಮಕ ಹಕ್ಕುಗಳನ್ನು ಉಲಂಘಿ-ಸುತ್ತಿರುವ ಮತ್ತು ಕುಂಟು ನೆಪಗಳನ್ನಿಟ್ಟುಕೊಂಡು ಸ್ಥಳೀಯ ನೌಕರರನ್ನು ವಿನಾಕಾರಣ ಉನ್ನತ, ಜವಾಬ್ದಾರಿ ಹುದ್ದೆಗಳನ್ನು ನೀಡದಿರುವ ರಿಮ್ಸ್ ಆಡಳಿತ ಮಂಡಳಿಯ ವಿರುದ್ಧ ತಕ್ಷಣವೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ರೀಮ್ಸ್ ಸಂಸ್ಥೆಯ ಡೀನ್ ಡಾ. ರಮೇಶ ಬಿ.ಎಚ್. ಅವರು ತಮ್ಮ ಹುದ್ದೆಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಕಲ್ಯಾಣ ಕರ್ನಾಟಕೇತರ ಉದ್ಯೋಗಿಗಳಿಗೆ ಏಕಪಕ್ಷೀಯವಾಗಿ ಹೆಚ್ಚಿನ ಅನುಕೂಲ ಕಲ್ಪಿಸುತ್ತಿದ್ದು, ಅರ್ಹತೆ, ಅನುಭವ ಮತ್ತು ಜೇಷ್ಠತೆಯಿದ್ದರೂ ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗಿಗಳನ್ನು ಉದ್ದೇಶಪೂರ್ವಕವಾಗಿ ಅವಕಾಶವಂಚಿತರನ್ನಾಗಿಸುತ್ತಿದ್ದಾರೆ. ಕಳೆದ ವರ್ಷ



ರಿಮ್ಸ್ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಬಿ.ಎಸ್ಸಿ. ನರ್ಸಿಂಗ್ ಕಾಲೇಜಿಗೆ 371(ಜೆ) ನಿಯಮಗಳನ್ವಯ ಕಡ್ಡಾಯವಾಗಿ ಕಲ್ಯಾಣ ಕರ್ನಾಟಕ ಪ್ರದೇಶದವರನ್ನೇ ಪ್ರಾಚಾರ್ಯರನ್ನಾಗಿ ನೇಮಿಸಬೇಕೆಂದು ನಿಯಮಗಳಿದ್ದರು ಅದನ್ನು ಲೆಕ್ಕಿಸದೆ, ಕಡಿಮೆ ಅರ್ಹತೆ ಮತ್ತು ಕಡಿಮೆ ಅನುಭವ ಹೊಂದಿರುವ ಕಲ್ಯಾಣ ಕರ್ನಾಟಕೇತರ ಉದ್ಯೋಗಿಗೆ ಪ್ರಾಚಾರ್ಯರ ಹುದ್ದೆ ನೀಡಿ ಸಂವಿಧಾನ ವಿರೋಧಿ ಕ್ರಮವನ್ನು ಅನುಸರಿಸುತ್ತಿದ್ದಾರೆ.

ಶೂಶ್ರಕಾಧಿಕಾರಿಗಳ ಮೇಲ್ವಿಚಾರಕರನ್ನು ಮತ್ತು ಸಹಾಯ ಅಧಿಕಾರಿಗಳನ್ನು ನೇಮಕ ಮಾಡುವಲ್ಲಿ ಕೂಡ ತಾರತಮ್ಯ ಎಸೆಗಿರುವುದು ಖಂಡನೀಯ. ಅಲ್ಲದೆ, ಬಿ.ಎಸ್ಸಿ. ನರ್ಸಿಂಗ್ ಕಾಲೇಜಿಗೆ ಕ್ಲಿನಿಕಲ್ ನರ್ಸಿಂಗ್ ವಿಭಾಗದಿಂದ ನಿಯೋಜನೆ ಮಾಡುವ ಸಂದರ್ಭದಲ್ಲಿ ಶೇ.75 ರಷ್ಟು ಹುದ್ದೆಗಳನ್ನು ಕಡ್ಡಾಯವಾಗಿ ಕಲ್ಯಾಣ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮಾತ್ರ, ಅರ್ಹತೆ, ಅನುಭವ ಮತ್ತು ಜೇಷ್ಠತೆಯ ಆಧಾರದಲ್ಲಿ ನಿಯೋಜಿಸಬೇಕು, ಶೇ.25 ರಷ್ಟು ಹುದ್ದೆಗಳನ್ನು ಮೆರಿಟ್ ಆದ-ಾರದಲ್ಲಿ ಸಾಮಾನ್ಯವಾಗಿ ನಿಯೋಜಿಸಬೇಕು ಎಂಬ ನಿಯಮವಿದ್ದರೂ ಇದನ್ನೂ ಉಲ್ಲಂಘಿಸಿದ್ದಾರೆ.

ಇದಷ್ಟೇ ಅಲ್ಲದೆ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲೇ ಇರುವ ರಿಮ್ಸ್ ಸಂಸ್ಥೆಗೆ ಕಲ್ಯಾಣ ಕರ್ನಾಟಕೇತರ ವ್ಯಕ್ತಿಯನ್ನು ಡೀನ್ ಆಗಿ ನೇಮಿಸಿರುವುದು ಸ್ವತಃ ಕಲ್ಯಾಣ ಕರ್ನಾಟಕ ಹಕ್ಕುಗಳಿಗೆ ಮಾಡಿದ ನೇರ ದ್ರೋಹವಾಗಿದೆ ಏಕೆಂದರೆ ಅವರು ಬೇರೆ ಭಾಗದವರು ಆಗಿರುವುದ-ರಿಂದ ಅವರು ಸ್ಥಳೀಯ ನೌಕರರಸ್ಥರನ್ನು ಕಡೆಗಣಿಸಿ ತಮ್ಮ ಭಾಗದವರ ಹಿತವನ್ನು ಕಾಪಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈ ಎಲ್ಲ ಸಂವಿಧಾನ ವಿರೋಧಿ, ಅನ್ಯಾಯಕರ ಕ್ರಮಗಳನ್ನು ತಕ್ಷಣವೇ ಹಿಂಪಡೆಯದಿದ್ದರೆ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ರಿಮ್ಸ್ ಕಚೇರಿ ಎದುರು ಧರಣಿ ಮತ್ತು ಜಿಲ್ಲಾ ಉಸ್ತುವಾರಿ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್ ರವರಿಗೆ ಘೇರಾವ್ ಹಾಕಿ ಹೋರಾಟ ಮಾಡಲಾಗುವುದು ಮುಂದೆ ಆಗುವ ಪರಿಣಾಮಗಳಿಗೆ ರಿಮ್ಸ್ ಆಡಳಿತ ಮತ್ತು ಸಂಬಂಧಿಸಿದ ಇಲಾಖೆಗಳ ಕಾರಣವಾಗಿರುತ್ತದೆಂದು ಅವರು ಸ್ಪಷ್ಟವಾಗಿ ಎಚ್ಚರಿಕೆ ನೀಡಿದ್ದಾರೆ.

## ನೇಮಕಾತಿ ಪ್ರಕಟಣೆ

VSKUB ನೇಮಕಾತಿ 2026-139 ಪ್ರಾಧ್ಯಾಪಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ VSKUB ನೇಮಕಾತಿ 2026: 139 ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಫೆಬ್ರವರಿ 2026 ರ VSKUB ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬಳ್ಳಾರಿ-ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13-ಫೆಬ್ರವರಿ-2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 30-01-2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13-ಫೆಬ್ರವರಿ-2026 ಅಧಿಕೃತ ವೆಬ್‌ಸೈಟ್: vskub.ac.in

## ಆರ್.ಎಚ್. ನಂಬರ್-1 ಗ್ರಾಮದಲ್ಲಿ ಶ್ರೀ ಬಾಲ ಮುರುಗನ್ 55ನೇ ವಾರ್ಷಿಕ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನೆರವೇರಿತು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕರ್ನಾಟಕದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ಪುನರ್ವಸತಿಗೊಂಡಿರುವ ಆರ್.ಎಚ್. ನಂಬರ್?1 ಗ್ರಾಮದಲ್ಲಿ ವಾಸಿಸುವ ತಮಿಳು ಸಮುದಾಯಗಳು ಕಳೆದ 55 ವರ್ಷಗಳಿಂದ ಸತತವಾಗಿ ಶಿಸ್ತು, ಸಂಪ್ರದಾಯ ಹಾಗೂ ಭಕ್ತಿಭಾವದಿಂದ ಹಬ್ಬಗಳನ್ನು ಆಚರಿಸಿಕೊಂಡು ಬರುತ್ತಿವೆ.**

ತಮಿಳು ತ್ರಿವರ್ಧಿಯಲ್ಲೇ ಪ್ರಸಿದ್ಧಿಯಾಗಿರುವ ಗ್ರಾಮದ ಶ್ರೀ ಮುರುಗನ್ ದೇವಸ್ಥಾನದಲ್ಲಿ ಶ್ರೀ ಬಾಲ ಮುರುಗನ್ 55ನೇ ವಾರ್ಷಿಕ ಜಾತ್ರಾ ಮಹೋತ್ಸವವು ಈ ಬಾರಿ ಕೂಡ ಭಕ್ತರ ಅಪಾರ ಭಾಗವಹಿಸುವಿಕೆಯಿಂದ ಅದ್ದೂ-ರಿಯಾಗಿ ನಡೆಯಿತು. ಜಾತ್ರಾ ಮಹೋತ್ಸವದ



ಅಂಗವಾಗಿ ಹಲವು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಮಹೋತ್ಸವದ ಸಂದರ್ಭದಲ್ಲಿ ಪ್ರತಿದಿನವೂ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಸೇವೆ, ಭಜನೆ ಹಾಗೂ ದೇವರ ನಾಮಸ್ಮರಣೆ ನಡೆಯಿತು. ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿ ಕಾವಡಿ ಸೇವೆ ಆಯೋಜಿಸಲಾಗಿದ್ದು, ವ್ರತಪಾಲನೆ ಮಾಡಿದ ಭಕ್ತರು ಪವಿತ್ರ ಕಾವಡಿಯನ್ನು ಹೊತ್ತು ಡೊಳ್ಳು?ವಾದ್ಯಗಳೊಂದಿಗೆ, ಭಕ್ತಿಗೀತೆಗಳನ್ನು ಹಾಡುತ್ತಾ ಪಾದಯಾತ್ರೆ ಮೂಲಕ ದೇವಸ್ಥಾನಕ್ಕೆ ಆಗಮಿಸಿದರು.

ಈ ಕಾವಡಿ ಮೆರವಣಿಗೆ ಗ್ರಾಮದಲ್ಲಿ ಭಕ್ತಿಭಾವ ಹಾಗೂ ಆದ-್ಯಾತ್ಮಿಕ ವಾತಾವರಣವನ್ನು ಸೃಷ್ಟಿಸಿತು. ಮುಖ್ಯ ದಿನದಂದು ಶ್ರೀ ಬಾಲ ಮುರುಗನ್ ದೇವರಿಗೆ ಮಹಾ ಅಭಿಷೇಕ, ಮಹಾ ಮಂಗಳಾರತಿ ಹಾಗೂ ವಿಶೇಷ ಅಲಂಕಾರ ನೆರವೇರಿತು. ನಂತರ ದೇವರ ಭವ್ಯ ಮೆರವಣಿಗೆ ನಡೆಯಿತು. ಬಳಿಕ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದ್ದು, ಗ್ರಾಮ ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು.

ಈ ಜಾತ್ರಾ ಮಹೋತ್ಸವದ ಯಶಸ್ಸಿಗೆ ದೇವಸ್ಥಾನ ಸಮಿತಿ ಸದಸ್ಯರು, ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಹಾಗೂ ಸ್ವಯಂಸೇವಕರು ಒಗ್ಗಟ್ಟಿನಿಂದ ಶ್ರಮಿಸಿದರು. 55 ವರ್ಷಗಳ ನಿರಂತರ ಪರಂಪರೆಯೊಂದಿಗೆ ನಡೆಯುತ್ತಿರುವ ಈ ಜಾತ್ರಾ ಮಹೋತ್ಸವವು ತಮಿಳು ಸಮುದಾಯದ ಧಾರ್ಮಿಕ ನಂಬಿಕೆ, ಸಂಸ್ಕೃತಿ ಹಾಗೂ ಏಕತೆಯ ಜೀವಂತ ಪ್ರತೀಕವಾಗಿದ್ದು, ಗ್ರಾಮದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಭಕ್ತಿಭಾವವನ್ನು ಇನ್ನಷ್ಟು ಬಲಪಡಿಸಿದೆ.

## ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಪ್ರಹ್ಲಾದ ಜೋಶಿಗೆ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ರಜಪೂತ ಸಮಾಜದ ವತಿಯಿಂದ ಪ್ರತಿಷ್ಠಾಪನೆಗೊಂಡಿರುವ ಮಹಾರಾಣಾ ಪ್ರತಾಪ್ ಸಿಂಹ ಅವರ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೇಂದ್ರ ಗ್ರಾಹಕ ವ್ಯವಹಾರಗಳು ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ ಜೋಶಿ ಇವರಿಗೆ ಆಮಂತ್ರಣ ನೀಡಲಾಯಿತು.**



ಬಿಜೆಪಿ ಜಿಲ್ಲಾ ನಿಕಟ ಪೂರ್ವ ಅಧ್ಯಕ್ಷ ಆರ್ ಎಸ್ ಪಾಟೀಲ ಕೂಚಬಾಳ,ರಾಜಪೂತ ಸಮಾಜದ ಅಧ್ಯಕ್ಷ ಹರಿಸಿಂಗ್ ಮೂಲಿಮನಿ,ಉಪಾಧ್ಯಕ ರತನಸಿಂಗ್ ಕೊಕಟನೂರ,ಪ್ರಕಾಶ ಹಜೇರಿ,ಭರತ ವಿಜಾಪುರ, ಜೆ.ಎಸ್.ಜಿ.ಸಂಸ್ಥೆಯ ಕಾರ್ಯದರ್ಶಿ ಶ್ರೀಕಾಂತ ಪತ್ತಾರ, ಜೈಸಿಂಗ್ ಮೂಲಿಮನಿ, ಸುರೇಶ ಹಜೇ-ರಿ,ಸಿರಸಕುಮಾರ ಹಜೇರಿ, ಪ್ರಭು ರಾಮನಗೌಡ, ಪ್ರಲ್ಹಾದ ಹಜೇ-ರಿ,ವಿಠಲಸಿಂಗ್ ಹಜೇರಿ, ರವಿ ಕಟ್ಟಿಮನಿ, ವಿಠಲಸಿಂಗ್ ಬೆಕಿನಾಳ, ಕುಮಾರ ಹಜೇರಿ, ಅರುಣ ದಡೇದ ಮತ್ತೀತರರು ಇದ್ದರು.

## ಗ್ರಾಮೀಣ ಪ್ರದೇಶಕ್ಕೆ ಕಲ್ಪಿಸುವ ರಸ್ತೆಗಳಿಗೆ ಮುಖ್ಯ ಆದ್ಯತೆ: ಆರ್ ಸಿದ್ದನಗೌಡ ತುರವಿಹಾಳ

ನೈಜ್ಯ ದೆಸೆ ನ್ಯೂಸ್

**ಮಸ್ಕಿ ಸಮೀಪದ ಕವಿತಾಳ ಟು ಮಸ್ಕಿ ಮುಖ್ಯ ರಸ್ತೆಯ ಮಧ್ಯದಲ್ಲಿ ಬರುವ ಇರಕಲ್ ಗ್ರಾಮದ ರಸ್ತೆಯು ಬಹಳ ದಿನಗಳಿಂದ ತಗ್ಗು ಗುಂಡಿಗಳಿಂದ ಹಾಳಾಗಿ ಪ್ರಯಾಣಕ್ಕೆ ತುಂಬಾ ತೊಂದರೆಯಾಗಿತ್ತು.**

ಇಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆರ್ ಸಿದ್ದನಗೌಡ ತುರವಿಹಾಳ ರವರು 19 ಲಕ್ಷ ರೂಪಾಯಿ ವೆಚ್ಚದ ಕಾಡ ಯೋಜನೆಯಲ್ಲಿ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಾ ಕ್ಷೇತ್ರದಲ್ಲಿ ಗ್ರಾಮೀಣ ಪ್ರದೇಶಕ್ಕೆ ರಸ್ತೆ ಕಲ್ಪಿಸುವುದು ಶಾಸಕರ ಮತ್ತು ನಮ್ಮ ಮುಖ್ಯ ಆದ್ಯತೆಯಾಗಿದೆ, ಅದಕ್ಕಾಗಿ ಇಂದು ಭೂಮಿ



ಪೂಜೆ ಮಾಡಿದ್ದು ಬರುವ ದಿನಗಳಲ್ಲಿ ಮತ್ತಷ್ಟು ಕ್ಷೇತ್ರಾದ್ಯಂತ ಕುಡಿಯುವ ನೀರು, ರಸ್ತೆ, ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ಗಮನ ಕೊಡಲಾಗುವುದು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆರ್ ಸಿದ್ದನಗೌಡ ತುರವಿಹಾಳ ಹೇಳಿದರು.

ಈ ವೇಳೆಯಲ್ಲಿ ಶ್ರೀ ಬಸವ ಪ್ರಸಾದ ಶರಣರು ಶಿವಶಕ್ತಿ ಪೀಠ ಇರಕಲ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವೆಂಕಟರಡ್ಡಿಗೌಡ ಹಾಲಾಪೂರ, ಬಲವಂತರಾಯ್ ಗೌಡ ವಟಗಲ್ , ಹನುಮೇಶ ಬಾಗೋಡಿ, ರವಿ ದೇಸಾಯಿ ಹಾಲಾಪೂರ, ಲಕ್ಷ್ಮಣ ಹಾಲಾಪುರ, ಕನಕಪ್ಪ ತೋರಣದಿನ್ನಿ, ಮೌನೇಶ ಹಾಲಾಪೂರ, ವಿಜಯಕುಮಾರ, ಕ-ರಿಯಪ್ಪ ಪೊಲೀಸ್ ಪಾಟೀಲ್, ರವಿಕುಮಾರ, ಶಂಭುಲಿಂಗ ಇನ್ನಿತರರು ಇದ್ದರು.

## ರಾಯಚೂರು ಉತ್ಸವ: ಫೆಬ್ರವರಿ 4ರಿಂದ ಹೆಲಿಕ್ಯಾಪ್ಟರ್ ರೈಡ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 2 (ಕರ್ನಾಟಕ ವಾರ್ತೆ): ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಫೆಬ್ರವರಿ 4ರಿಂದ 9ರವರೆಗೆ ರಾಯಚೂರು ಜಿಲ್ಲೆಯ ನಾಗರೀಕರಿಗೆ ಬಾನಂಗಳದಿಂದ ರಾಯಚೂರು ವೀಕ್ಷಣೆಗೆ ರಾಯಚೂರು ಬೈಸ್ಕಯ್ ಎಂಬ ವಿಶೇಷ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವನ್ನು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.**

ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವು ಫೆಬ್ರವರಿ 4ರಿಂದ 9ರವರೆಗೆ ಪ್ರತಿ ದಿನ ಬೆಳಗ್ಗೆ 8 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಗೂ ಮಧ್ಯಾಹ್ನ 12.30 ರಿಂದ ಸಂಜೆ 4.30ರವರೆಗೆ ಇರುತ್ತದೆ. ಪ್ರತಿಯೊಬ್ಬರಿಗೆ 3,500 ರೂ. ಶುಲ್ಕ ಇರುತ್ತದೆ. 2 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿರುತ್ತದೆ.

ಆನ್‌ಲೈನ್ ಟಿಕೇಟ್ ಬುಕ್ಕಿಂಗ್‌ಗೆ ವೆಬ್‌ಸೈಟ್ ವಿಳಾಸ: www.helitaxii.com ಅಥ-ವಾ https://share.google/cE-DrwhwrhJdOvBFYK ಮೂಲಕ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಫ್‌ಲೈನ್ ಟಿಕೇಟ್‌ಗಾಗಿ ಮೊಬೈಲ್ ಸಂಖ್ಯೆ: 9482565016, 9448527188, 9611112356, 7676522104, 6362238100ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 02 (ಕರ್ನಾಟಕ ವಾರ್ತೆ): ಇಲ್ಲಿನ ರೇಷ್ಮೆ ಇಲಾಖೆಯಿಂದ 2023-24 ಹಾಗೂ 2024-25ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಉತ್ತಮ ಪ್ರಗತಿ ಸಾಧಿಸಿರುವ ಅರ್ಹ ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ಪ್ರಶಸ್ತಿಗಾಗಿ ರೇಷ್ಮೆ ಬೆಳೆಗಾರರು ಕನಿಷ್ಠ 1.00 ಎಕರೆ ಹಿಪ್ಪುನೇರಳೆ ತೋಟ ಹಾಗೂ ಪ್ರತ್ಯೇಕ ಹುಳು ಸಾಕಾಣಿಕಾ ಮನೆ ಹೊಂದಿರಬೇಕು. 100 ಮೊಟ್ಟೆಗೆ ಸರಾಸರಿ ರೇಷ್ಮೆ ಗೂಡಿನ ಇಳುವರಿ 65 ಕೆ.ಜಿ. ಹಾಗೂ ಒಂದು ಎಕರೆಗೆ ರೇಷ್ಮೆ ಗೂಡಿನ ಉತ್ಪಾದನೆ 500 ಕೆ.ಜಿ.ಗಿಂತ ಕಡಿಮೆ ಇರಬಾರದು. ರೇಷ್ಮೆ ಬೆಳೆಗಾರರು ರೇಷ್ಮೆ ಪಾಸ್ ಬುಕ್, ರೇಷ್ಮೆ ಮೊಟ್ಟೆ ಅಥವಾ ಚಾಕಿ ಖರೀದಿಸಿರುವ ಬಗ್ಗೆ ಹಾಗೂ ರೇಷ್ಮೆ ಗೂಡು ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಹೊಂದಿರಬೇಕು. ರೇಷ್ಮೆ ಬೆಳೆಗಾರರು ಸ್ಥಳೀಯ ರೇಷ್ಮೆ ವಿಸ್ತರಣಾಧಿಕಾರಿಗಳು ಅಥವಾ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ದಾಖಲಾತಿಗಳೊಂದಿಗೆ ಒದಗಿಸಿ ಅರ್ಜಿ ಪಡೆಯುವುದು. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 06-02-2026ರ ಒಳಗೆ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-220322ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ರೇಷ್ಮೆ ಇಲಾಖೆಯ ರೇಷ್ಮೆ ಕೃಷಿ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಜಾಸೌಧ ಸ್ಥಳ ರದ್ದುಗೊಳಿಸುವಂತೆ ಆಗ್ರಹಿಸಿ ಮನವಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ನಿರ್ಮಾಣವಾಗಲಿರುವ ಪ್ರಜಾಸೌಧ(ತಾಲೂಕ ಆಡಳಿತದ ಕೇಂದ್ರ ಕಟ್ಟಡ) ನಿರ್ಮಾಣಕ್ಕೆ ಆಯ್ಕೆ ಮಾಡಿದ ಸ್ಥಳ ರದ್ದುಗೊಳಿಸಿ ಬೇರೆ ಸ್ಥಳ ಆಯ್ಕೆ ಮಾಡಲು ಆಗ್ರಹಿಸಿ ತಾಲೂಕ ಹೋರಾಟ ಸಮಿತಿಯ ಪದಾಧಿಕಾರಿಗಳು ಸೋಮವಾರ ತಹಸಿಲ್ದಾರ್ ಡಾ.ವಿನಯಾ ಹೂಗಾರ ಮೂಲಕ ಕಂದಾಯ ಸಚಿವ ಕೃಷ್ಣ ಭೈರೇಗೌಡರಿಗೆ ಮನವಿ ಸಲ್ಲಿಸಿದರು.**

ಸದರಿ ವಿಷಯದ ಕುರಿತು ಪ್ರತಿಭಟನಾಕಾರರು ಮುಂಜಾನೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಲ್ ದಿಂದ ಶ್ರೀ ಬಸವೇಶ್ವರ ವೃತ್ತದ ವರೆಗೆ ಮೆರವಣಿಗೆ ನಡೆಸಿದರು. ಈ ಸಂದರ್ಭದಲ್ಲಿ ತಾಲೂಕ ಹೋರಾಟ ಸಮಿತಿಯ ಆರ್ ಎಸ್ ಪಾಟೀಲ ಕೂಚಬಾಳ, ಕಾಶಿನಾಥ ಮುರಾಳ, ಜೈಭೀಮ ಮುತ್ತಗಿ,ವಿಜಯ ಸಿಂಗ್ ಹಜೇರಿ



ಹಾಗೂ ರವೀಂದ್ರ ಕಟ್ಟಿಮನಿ ಮಾತನಾಡಿ ಸದರಿ ಕಟ್ಟಡಕ್ಕೆ ಆಯ್ಕೆ ಮಾಡಿದ ಸ್ಥಳವು ಪಟ್ಟಣದಿಂದ ಸುಮಾರು 4ರಿಂದ5 ಕಿ.ಮೀ. ದೂರದಲ್ಲಿರುವುದರಿಂದ ಸಾರ್ವಜನಿಕರಿಗೆ ಬರು ಹೋಗಲು ತುಂಬಾ ಕಷ್ಟವಾಗುತ್ತದೆ ಆದ್ದರಿಂದ ಪಟ್ಟಣಕ್ಕೆ ಹೊಂದಿಕೊಂಡಿರುವ ಎಲ್ಲರಿಗೂ ಅನುಕೂಲವಾಗುವಂತಹ ಪ್ರವಾಸಿ ಮಂದಿರ, ಹಳೆಯ ಕೆಇಬಿ, ಹಳೆ ಪುರಸಭೆ ಹಾಗೂ ಹಳೆ ವಾಟರ್ ಟ್ಯಾಂಕ್ (ಜಾಕ್ವೆಲ್) ಸ್ಥಳ ಇಲ್ಲಿ ಮಾಡಲು ಅನುಕೂಲವಿದ್ದು ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕು ಮೊದಲಿನ ದೂರದ ಸ್ಥಳ ರದ್ದು ಗೊಳಿಸಬೇಕು.

ಸಮಿತಿಯ ಈ ಮನವಿಗೆ ನಾಲ್ಕೈದು ದಿನಗಳಲ್ಲಿ ಸ್ಪಂದಿಸದೆ ಹೋದರೆ ಇನ್ನಷ್ಟು ಉಗ್ರ ಹೋರಾಟವನ್ನು ಮಾಡಲಾಗುವುದು ಎಂದು ತಿಳಿಸಿದರು. ತಾಲೂಕ ಹೋರಾಟ ಸಮಿತಿ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಉಪಾಧ್ಯಕ್ಷ ಮುತ್ತಪ್ಪ ಚಮಲಾಪೂರ, ಎಂ.ಎಸ್.ಸರಶೆಟ್ಟಿ,ವಾಸು ಹೆಬಸೂರ, ಪ್ರಕಾಶ ಹಜೇರಿ, ಮಾನಸಿಂಗ್ ಕೊಕಟನೂರ, ಆರ್.ಎಲ್.ಕೊಪ್ಪದ, ಎಂ.ಎಚ್. ಕೆಂಭಾವಿ,-ಎಂ.ಕೆ.ಚೋರಗಸ್ತಿ, ಮುದುಕಪ್ಪ ಬಡಿಗೇರ, ಸಿದ್ದಪ್ಪ ಕಟ್ಟಿಮನಿ, ತಮ್ಮಣ್ಣ ದೇಶಪಾಂಡೆ, ಭರತಸಿಂಗ್ ವಿಜಾಪುರ, ಅಮೀತಸಿಂಗ್ ಮನಗೂಳಿ, ಡಾ.ಎ.ಎ.ನಾಲಬಂದ,ಡಾ.ಆರ್.ಕೆ.ಅಗರವಾಲ, ಗಂಗಾಧರ ಕಸ್ತೂ-ರಿ,ಮಂಜುನಾಥ ಶೆಟ್ಟಿ,ಡಾ.ಆನಂದ ಭಟ್, ಶ್ರೀಪಾಲ ಸಂಗಮಿ. ಪ್ರಹ್ಲಾದ ಹಜೇರಿ,ಗುರುರಾಜ ಮಾನೆ, ತಮ್ಮಣ್ಣ ದೇಶಪಾಂಡೆ, ನಾಗೇಶ ಕಟ್ಟಿಮನಿ, ಮಹೇಶ ಚಲವಾದಿ, ಸಿರಸಕುಮಾರ ಹಜೇರಿ, ರತನಸಿಂಗ್ ಕೊಕಟನೂರ, ಶರಣು ಗೊಟಖಂಡಕಿ, ಮುತ್ತು ಕಶೆಟ್ಟಿ,

## ರಾಯಚೂರು ಉತ್ಸವದ ಮಕ್ಕಳ ಹಬ್ಬಕ್ಕೆ ಕಿಕ್ಕಿರಿದು ತುಂಬಿದ ಸ್ಟೇಡಿಯಂ, ಚಿಣ್ಣರ ಸಂಭ್ರಮ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆಬ್ರವರಿ 02 (ಕರ್ನಾಟಕ ವಾರ್ತೆ): ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಆಚರಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಫೆ.2 ಮತ್ತು ಫೆ.3ರಂದು ಎರಡು ದಿನಗಳ ಕಾಲ ಆಯೋಜನೆ ಮಾಡಿದ ಮಕ್ಕಳ ಹಬ್ಬಕ್ಕೆ ಮೊದಲನೇ ದಿನ ಫೆ.2ರಂದು ಯಶಸ್ವಿಯಾಗಿ ಚಾಲನೆ ಸಿಕ್ಕಿತು.**

ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಕ್ಕಳ ಹಬ್ಬದ ನಿಮಿತ್ತ ಹಾಕಿದ್ದ ಬೇರೆ ಬೇರೆ ಬಗೆಯ ಪ್ರದರ್ಶನ ಕಾರ್ಯಕ್ರಮಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರಾದ ಕೇಶವರೆಡ್ಡಿ ಅವರು ಚಾಲನೆ ನೀಡಿದರು. ರಾಯಚೂರಿನ ಕವಿ ಲೇಖಕ ಈರಣ್ಣ ಬೆಂಗಾಲಿ ಅವರ ಫೋಟೊಗ್ರಫಿಯ ನಾನಾ ಹಕ್ಕಿಗಳ ಚಿತ್ರಗಳ ಮಳಿಗೆ, ವಿವಿಧ ಗಣ್ಯ ವ್ಯಕ್ತಿಗಳ ಕಾರ್ಟೂನ್ ಪ್ರದರ್ಶನ ಮಳಿಗೆ, ಮುಖವಾಡ ತಯಾರಿ ಮಳಿಗೆ, ಗೂಡುದೀಪ ತಯಾರಿ ಮಳಿಗೆ, ಗಾಳಿಪಟ ಮಳಿಗೆ, ಆರೋಗ್ಯಕರವಾಗಿ ತಿನ್ನಿರಿ, ಆರೋಗ್ಯವಾಗಿರಿ ಎಂಬ ಸಂದೇಶದ ನಾನಾ ಮಳಿಗಳಿಗೆ ಮತ್ತು



ರೋಬ್ಯಾಟಿಕ್ ಚಿಟ್ಟೆಗಳ ಪ್ರದರ್ಶನದ ವೀಕ್ಷಣೆ ನಡೆಸಿ ಮಕ್ಕಳು ಖುಷಿ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ನೋಂದಣಿ: ಈ ಕಾರ್ಯಕ್ರಮದಲ್ಲಿ ರಾಯಚೂರು ಸಿಟಿ ಸೇರಿದಂತೆ ಬೇರೆ ಬೇರೆ ಕಡೆಯ ಸರ್ಕಾರಿ ಹಾಗೂ ಖಾಸಗಿ ಶಾಲೆಯ ಮಕ್ಕಳು ಭಾಗಿಯಾಗಿದ್ದರು.

ಮೊದಲನೇ ದಿನ ಸುಮಾರು 3 ಸಾವಿರಕ್ಕೂ ಹೆಚ್ಚು ಮಕ್ಕಳನ್ನು ನೋಂದಣಿ ಮಾಡಿಕೊಳ್ಳಲಾಯಿತು. ಬೆಳಿಗ್ಗೆ 9 ಗಂಟೆ ವೇಳೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಜಿಲ್ಲೆಯ ವಿವಿಧ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ಕ್ರೀಡಾಂಗಣದಲ್ಲಿ ವರದಿ ಮಾಡಿಕೊಂಡು ರೋಬೋಟಿಕ್ ಪ್ರಾಣಿಗಳು, ರೋಬೋಟ್ ಪ್ರದರ್ಶನ, ಗೊಂಬೆ ನೃತ್ಯ, ಗಾಳಿಪಟ, ಮುಖವಾಡ ತಯಾರಿಕೆ, ಜೇಡಿಮಣ್ಣು ಸೇರಿದಂತೆ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಸಂಭ್ರಮಿಸಿದರು. ಕುಮಾರಿ ತನ್ವಿ ನಾಯಕ ಅವರು ಮೊದಲಿಗೆ ಭರತನಾಟ್ಯ ನೃತ್ಯ ಗೈದಳು. ಕೋಳಿ ನೃತ್ಯ, ಜಾದೂ ಪ್ರದರ್ಶನ ನಂತರ ಮಾಣಿಕ ಪ್ರಭು ಅಕಾಡೆಮಿ ಫಾರ್ ದಿ ಬ್ಲೈಂಡ್ ರಾಯಚೂರು ವತಿಯಿಂದ ಸಮೂಹ ಗಾಯನ, ಕುಮಾರಿ ಭಕ್ತಿ



ತಂದೆ ರಾಜಶೇಖರ ಅವರಿಂದ ವಚನ ಸಂಗೀತ, ಕುಮಾರ ವೆಂಕಟೇಶ ನಂಜಲದಿನ್ನಿ ಅವರಿಂದ ಹೆಜ್ಜೆಮೇಳ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಮಧ್ಯಾಹ್ನ ವೇಳೆಯಲ್ಲಿ ರಾಘವ ನಾಟ್ಯಾಮೃತ ಶಾಲೆಯಿಂದ ಭರತನಾಟ್ಯ, ಸೇಂಟ್ ಮೇರಿ ಕಾನ್ವೆಂಟ್ ಶಾಲೆ ರಾಯಚೂರು ವತಿಯಿಂದ ಜಾನಪದ ನೃತ್ಯ, ಗಬ್ಬೂರಿನ ವಿದ್ಯಾಜ್ಯೋತಿ ಶಿಕ್ಷಣ ಸಂಸ್ಥೆಯಿಂದ ಜಂಪ್ ರೋಪ್ ಮತ್ತು ಮಲ್ಲಕಂಬ, ಮಲ್ಲಟ ಕೆ.ಜಿ.ಬಿ.ವಿ. ಶಾಲೆಯಿಂದ ಕರಾಟೆ ಪೀರಾಮೀಡ್, ರಾಯಚೂರಿನ ಜ್ಞಾನಗಂಗಾ ಶಾಲೆಯಿಂದ ಜಾನಪದ ನೃತ್ಯ, ರಾಯಚೂ-ರಿನ ಮ್ಯಾಕ್ಸ್‌ವೆಲ್ ಶಾಲೆ ಇಂಟರ್ ನ್ಯಾಷನಲ್ ಸ್ಕೂಲ್‌ನಿಂದ ಭರತನಾಟ್ಯ, ರಾಯಚೂರಿನ ಸೇಂಟ್ ಜೇವಿಯರ್ ಶಾಲೆಯಿಂದ ಸಾಂಸ್ಕೃತಿ-ಕ ಕಾರ್ಯಕ್ರಮ, ರಾಯಚೂರಿನ ಲಯನ್ಸ್ ಪ್ರೌಢಶಾಲೆಯಿಂದ ಸಾಮೂಹಿಕ ನೃತ್ಯ, ರಾಯಚೂ-



ರಿನ ಸೇಂಟ್ ಜೇವಿಯರ್ ಶಾಲೆಯಿಂದ ಸಿಂಧೂರ ಕಾರ್ಯಚರಣೆ ಕುರಿತು ಕಾರ್ಯಕ್ರಮಗಳು ನಡೆದವು. ಶಿಕ್ಷಕರಲ್ಲಿ ಉತ್ಸಾಹ: ಮಕ್ಕಳ ಉತ್ಸವಕ್ಕೆ ತಮ್ಮ ತಮ್ಮ ಶಾಲಾ ಮಕ್ಕಳನ್ನು ಕರೆ ತಂದಿದ್ದ ಬೇರೆ ಬೇರೆ ಶಾಲೆಗಳ ಗುರುಗಳು ಮತ್ತು ಗುರುಮಾತೆಯರು ಸಹ

